ಅಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ದಿನಾಂಕ 30-8-94ರಂದು ಲಿಖಿತ ಮೂಲಕ ಉತ್ತರಿಸುವ 4ನೇ ಪಟ್ಟಿಯಲ್ಲಿರುವ 77 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಮೂಲ್ಕಿ ಪೋಲೀಸ್ ಸ್ಟೇಷನ್ನಿನ ಜೀಪಿನ ಬಗ್ಗೆ

561 - ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳೆದ ಅಧಿವೇಶನದಲ್ಲಿ ಏಪ್ರಿಲ್ 1994ರ ಮೊದಲು ಮೂಡಬಿದಿರೆ-ಮೂಲ್ಕಿ ಸ್ಟೇಷನ್ನಿಗೆ ಜೀಪು ಒದಗಿಸಲಾಗುವುದೆಂದು ಸರ್ಕಾರದವರು ಆಶ್ವಾಸನೆ ನೀಡಿದ್ದು ನಿಜವೇ?*

ಆ) *ಹಾಗಿದ್ದಲ್ಲಿ ಈ ತನಕ ಜೀಪು ಒದಗಿಸದಿರಲು ಕಾರಣವೇನು? ಹಾಗೂ ಎಂದು ಒದಗಿಸಲಾಗುವುದು?*

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಹೌದು

ಆ) ಮೂಲ್ಕಿಯು ಸರ್ಕಲ್ ಪೋಲೀಸ್ ಕಛೇರಿ ಹಾಗೂ ಪೋಲೀಸ್ ಠಾಣೆ ಹೊಂದಿರುತ್ತದೆ. ಸರ್ಕಲ್‌ಗೆ ಜೀಪು ಒದಗಿಸಲಾಗಿದ್ದು, ಪೋಲೀಸ್ ಠಾಣೆಗಳಾದ ಮೂಡಬಿದಿರೆ-ಮೂಲ್ಕಿಗೆ ಮೋಟಾರ್ ಸೈಕಲ್‌ಗಳನ್ನು ಒದಗಿಸಲಾಗಿದೆ. ಈ ಪೋಲೀಸ್ ಠಾಣೆಗಳಿಗೆ ಮುಂಬರುವ ವರ್ಷಗಳಲ್ಲಿ ಹಣ ಒದಗಿಸಿಕೊಂಡು ಆದ್ಯತೆ, ಅಗತ್ಯತೆಯನ್ನು ಅನುಸರಿಸಿ ಜೀವನ್ನು ಒದಗಿಸಲಾಗುವುದು.

ಮುಖ್ಯಮಂತ್ರಿಯವರ ವಿದೇಶಿ ಪ್ರವಾಸದ ಬಗ್ಗೆ

559 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಹಾಲಿ ಮುಖ್ಯಮಂತ್ರಿಯವರು ಇತ್ತೀಚೆಗೆ ಅಮೇರಿಕಾಕ್ಕೆ ನೀಡಿದ ಭೇಟಿ ಅಧಿಕೃತವೇ ಅಥವಾ ಖಾಸಗಿಯೇ ಇವರೊಡನೆ ಹೋಗಿದ್ದವರು ಯಾರು ಯಾರು ಈ ಪ್ರವಾಸದಿಂದ ಸರ್ಕಾರಕ್ಕೆ ಆದ ಖರ್ಚು ಎಷ್ಟು?*

ಆ) *ಇವರು ಭೇಟಿಯಾದ ಪ್ರಮುಖ ವ್ಯಕ್ತಿಗಳು ಅಥವಾ ಸಂಸ್ಥೆಗಳು ಯಾವುವು, ಚರ್ಚಿಸಿದ ವಿಷಯಗಳು ಯಾವುವು, ಅವುಗಳ ಫಲಶ್ರುತಿಯೇನು ಹಾಗೂ ವಾಪಸ್ಸಾದ ನಂತರ ಈ ವಿಷಯಗಳಲ್ಲಿ ಆಗಿರುವ ಬೆಳವಣಿಗೆಗಳು ಏನು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಇದು ಒಂದು ಖಾಸಗಿ ಭೇಟಿಯಾಗಿದ್ದು, ನನ್ನ ಜೊತೆ ನನ್ನ ಪತ್ನಿಯವರು ಪ್ರವಾಸ ಮಾಡಿದ್ದಾರೆ. ಇದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ಖರ್ಚಾಗಿಲ್ಲ.

ಆ) ಪ್ರವಾಸವು ಖಾಸಗಿಯಾಗಿದ್ದರೂ ಸಹ ರಾಜ್ಯದ ಹಿತ ದೃಷ್ಟಿಯ ಸಲುವಾಗಿ ಪ್ರಯತ್ನ ಮಾಡಲಾಗಿದೆ. ರಾಜ್ಯದ ವಿವಿಧ ಯೋಜನೆಗಳಿಗೆ ಅತ್ಯಾವಶ್ಯಕವಾಗಿರುವ ಬಂಡವಾಳ ಹೂಡಿಕೆ ಬಗ್ಗೆ ಮತ್ತು ತಂತ್ರಜ್ಞಾನದ ಬಗ್ಗೆ ಅಮೇರಿಕ ದೇಶದ ಕೆಲವು ಪ್ರತಿಷ್ಠಿತ ಕಂಪೆನಿ ಸಂಸ್ಥೆಗಳ ಮುಖ್ಯಸ್ಥರುಗಳೊಂದಿಗೆ ಭೇಟಿಯನ್ನು ಈ ಪ್ರವಾಸ